'ಊರದ ಚೇಳಿನ ಏರದ ಬೇನೆಯಲ್ಲಿ ಮೂರು ಲೋಕವೆಲ್ಲಾ ನರಳಿತ್ತು...' ಎಂಬುದು ಅಲ್ಲಮನ ಒಂದು ಸುಪ್ರಸಿದ್ಧ ಬೆಡಗಿನ ವಚನ. ಕಣ್ಣಿಗೆ ಕಾಣದ ಚೇಳು ಕಚ್ಚಿಲ್ಲ, ಆದರೂ ವಿಷ ಏರಿಬಿಟ್ಟಿದೆ, ನರಳಾಟ ತೀವ್ರಗತಿಯಲ್ಲಿದೆ, ಅದೂ ಮೂರೂ ಲೋಕದಲ್ಲಿ! ಅದಕ್ಕೆ ಔಷಧಿ ಇದೆ. ಅದು ಕೈಗೆ ಸಿಗುವುದು ಕಷ್ಟ ಎನ್ನುತ್ತಾನೆ ಅಲ್ಲಮ.

ಮನುಷ್ಯ ನಾಗರಿಕತೆಯ ನಂತರ ಬೆಳೆದು ಬೇರುಬಿಟ್ಟ ಅಧಿಕಾರದಾಹದ ರಾಜಕಾರಣ ಅದರೊಂದಿಗೆ ಬೆಸೆದುಕೊಂಡ ಹಲವು ಧರ್ಮಗಳ ಸಂಗಾತದಿಂದ ಹುಟ್ಟಿಕೊಂಡ ಕಲಹಗಳು, ಇದೆಲ್ಲದರ ಹಿನ್ನೆಲೆಯಲ್ಲಿ ಶತಶತಮಾನಗಳಲ್ಲಿ ಹಾಸಿಕೊಂಡು ಬಂದ ಮೌಢ್ಯ ಮತ್ತು ಅಜ್ಞಾನವನ್ನೇ ಕಚ್ಚದ ಚೇಳಿನ ಏರದ ಬೇನೆ ಎನ್ನುತ್ತ ಅಲ್ಲಮ ಮತ್ತೊಂದು ಪ್ರಸಿದ್ಧ ವಚನದಲ್ಲಿ 'ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ, ಹೆಣ್ಣು ಹೊನ್ನು ಮಣ್ಣಿಂಗೆ ಸತ್ತುದು ಕೋಟಿ, ಗುಹೇಶ್ವರ ನಿಮಗಾಗಿ ಸತ್ತವರನಾರನೂ ಕಾಣೆ' ಎಂದ. ಈ ಮಾತುಗಳ ಹಿನ್ನೆಲೆಯಲ್ಲಿ ಅಲ್ಲಮನನ್ನು ಕುರಿತಾದ ಪ್ರಸಿದ್ಧ ಓದುಗಬ್ಬ ಚಾಮರಸನ 'ಪ್ರಭುಲಿಂಗ ಲೀಲೆ'ಯನ್ನು ಅವಲೋಕಿಸಬಹುದು.

ಸಾಹಿತ್ಯ ಚರಿತ್ರೆಕಾರರು ಅಲ್ಲಮಪ್ರಭುವಿನ ಕಾಲವನ್ನು ಹನ್ನೆರಡನೆಯ ಶತಮಾನದ ಮಧ್ಯಭಾಗವೆಂದೂ, ಚಾಮರಸನ ಕಾಲವನ್ನು ಹದಿನೈದನೆಯ ಶತಮಾನದ ಮಧ್ಯಭಾಗವೆಂದೂ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಶರಣ ಅಲ್ಲಮ ಮತ್ತು ಕವಿ ಚಾಮರಸನ ಸ್ವಂತ ಬದುಕಿನ ವಿವರಗಳು ಅಷ್ಟಾಗಿ ಸಿಗದಿದ್ದರೂ ಅವರ ನಂತರ ಬಂದ ಕವಿ ಕಾವ್ಯ ದಾಖಲೆಗಳು ಸಾಕುಬೇಕೆನಿಸುವಂತಿವೆ. ಆದರೆ, ಅವು ಲೀಲೆಯ ಕಥೆಗಳು. ಇತಿಹಾಸದಲ್ಲಿ ಸಂದ ರಾಜ ಮಹಾರಾಜರ ಕಾವ್ಯ ಪುರಾಣ ಕಥೆಗಳು ಸಾಹಸಭರಿತ 'ವಿಜಯ'ಗಳಾದರೆ, ಆಗಿಹೋದ ಸಂತರ ಕಥನಗಳು 'ಲೀಲೆ' ಎನಿಸಿಕೊಳ್ಳುತ್ತವೆ.

ಅಲ್ಲಮನ ಬದುಕಿನ ಐತಿಹಾಸಿಕ ಸತ್ಯ ತಕ್ಕಮಟ್ಟಿಗೆ ಗೋಚರವಾಗುವುದು ಹರಿಹರನ ಪ್ರಭುದೇವರ ರಗಳೆಯ ಕಥಾನಕದಲ್ಲೇ. ಹದಿಮೂರನೆಯ ಶತಮಾನದಲ್ಲಿ ಬಂದ ಹರಿಹರ, ರಾಘವಾಂಕರನ್ನು ಮೆಚ್ಚಲೇಬೇಕು. ಯಾಕೆಂದರೆ, ಅವರು ತಮ್ಮ ಬೆನ್ನ ಹಿಂದೆ ಸಂದುಹೋದ ಕೆಲವರಾದರೂ ಶರಣರನ್ನು ಕುರಿತಾಗಿ ಕೃತಿ ರಚಿಸಿದ್ದು ದೊಡ್ಡ ಸಂಗತಿ. ಅಷ್ಟೇ ಅಲ್ಲ ಕನ್ನಡ ಕಾವ್ಯಮಾರ್ಗಕ್ಕೆ ಅವರು ಕೊಟ್ಟ ಹೊಸ ತಿರುವು. ಅರಮನೆಯನ್ನು ಆಶ್ರಯಿಸಿ ಕೃತಿ ರಚಿಸಿದ ಕವಿಗಳ ಪುರಾಣ ಕಥೆಗಳು ಹಿಂದೆ ಸರಿದು, ಕಣ್ಣ ಮುಂದೆ ಆಗಿ ಹೋದವರೇ ಕಾವ್ಯವಸ್ತುವಾದದ್ದು ದಾಖಲಾರ್ಹ ಸಂಗತಿ.

ಅಲ್ಲಮನನ್ನು ಕಾವ್ಯನಾಯಕನನ್ನಾಗಿ ಆರಿಸಿಕೊಳ್ಳುವಲ್ಲಿ ಚಾಮರಸ ಆಡಿರುವ ಮಾತು 'ಕಾಳಗದ ಕಥೆಯಲ್ಲ, ವಿಷಯಗಳೇಳಿಗೆಯ ವಿಧಿಯಲ್ಲ... ಕಾಳಗವು ಕರಣದಲಿ, ಸುರತದ ಕೀಲು ಕುಂಡಲಿಯಲ್ಲಿ... ಸತ್ತವರ ಕಥೆಯಲ್ಲ, ಜನನದ ಕುತ್ತದಲಿ ಕುದಿಕುದಿದು ಕರ್ಮದ ಕತ್ತಲೆಗೆ ಸಿಲುಕುವರ ಸೀಮೆಯ ಹೊಲಬು ತಾನಲ್ಲ...' ಈ ವಾಕ್ಯಗಳಲ್ಲಿ ಕಾವ್ಯದ ಉದ್ದೇಶವು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲ ಚಾಮರಸನ ಪ್ರಾರ್ಥನಾ ಪದ್ಯಗಳೂ ಕೂಡ ಬ್ರಹ್ಮ, ವಿಷ್ಣು, ಸರಸ್ವತಿ, ಲಕ್ಷ್ಮಿಯರನ್ನು ಕುರಿತಾದುದಲ್ಲ. ಬಸವಣ್ಣ, ಮರುಳಶಂಕರದೇವ, ಮಡಿವಾಳಮಾಚಯ್ಯ, ಸಿದ್ಧರಾಮಯ್ಯನನ್ನು ಕುರಿತಾದವು ಎಂಬುದನ್ನು ಗಮನಿಸಬೇಕು.

★★★

ಅಲ್ಲಮನ ನಂತರದ ಇನ್ನೂರು ವರ್ಷಗಳಲ್ಲಿ ಬಂದ ಚಾಮರಸ ಕುಮಾರವ್ಯಾಸನ ಸಮಕಾಲೀನ, ಅಂದರೆ ಕಾಲ 1450ರ ಆಸುಪಾಸು. ಎಲ್ಲ ಕವಿಗಳ ಮೇಲೆಯೂ ಇರುವಂತೆ ಇವರಿಬ್ಬರ ನಡುವೆಯೂ ವಿರಸದ ದಂತಕಥೆ ಹಬ್ಬಿ ಅದು ಶತಮಾನಗಳ ಉದ್ದಕ್ಕೂ ಜನಪ್ರಿಯವಾಗಿಬಿಟ್ಟಿದೆ. ಆದರೆ, ಇಬ್ಬರೂ ಕವಿಗಳ ನಡುವೆ ಇರುವ ಕಾವ್ಯ ಸಾಂಗತ್ಯ ಮಾತ್ರ ಆಶ್ಚರ್ಯವೆನಿಸುವಂತಿದೆ.

ಕುಮಾರವ್ಯಾಸ ಭಾರತ ಕಥಾಮಂಜರಿಯಲ್ಲಿ ಹಸ್ತಿನಾವತಿಯ ಹೊರವಲಯದ ಗುಡಿಸಲಲ್ಲಿದ್ದ